ಗುರುತಿಸಿಕೊಂಡು ಮೀಡಿಯಾದ ಭಕ್ತರನ್ನು ಜೊತೆ ಇಟ್ಟುಕೊಂಡೆ ಪಾದ ಪೂಜೆಗೆ ತೆರಳುತ್ತಿದ್ದರು. ಕೇರಿಯ ದಲಿತರು ಕೊಡುವ ಹಣ್ಣು ಹಂಪಲುಗಳನ್ನು ಹಿಂಬದಿಯ ಸೇವಕನ ಕೈಗಿತ್ತು, ನಮ್ಮ ಎಲ್ಲ ಇಂದಿನ ಕ್ರಿಯೆಗಳಿಗೆ ಕಾರ್ಯ ಕಾರಣ ಸಂಬಂಧ ಇರುತ್ತದೆ. ಇಂದಿನ ಕರ್ಮಗಳಿಗೆ ಪೂರ್ವದ ಅವರವರ ಪಾಪಗಳೆ ಕಾರಣ ಎಂದು ಭಗವದ್ಗೀತೆ ಹೇಳುತ್ತದೆ. ನಾವೆಲ್ಲ ಹಿಂದೂಗಳು, ನಮ್ಮ ಮಾತೆ ಗೋಮಾತೆ, ನಮ್ಮ ಧರ್ಮ ನಮ್ಮ ತಾಯಿ ಅಪಾಯದಲ್ಲಿದ್ದಾಳೆ, ಅವಳ ರಕ್ಷಣೆ ನಮ್ಮೆಲ್ಲರ ಹೊಣೆ. ಆಸೆ ಆಮಿಷಗಳಿಗೆ ಒಳಗಾಗಿ ಇನ್ಯಾರನ್ನೊ ನಮ್ಮವರೆನ್ನುವುದು ಹೆತ್ತ ತಾಯಿಗೆ ಮಾಡುವ ದ್ರೋಹ, ಧರ್ಮ ರಕ್ಷಣೆಗಾಗಿ ಅಗತ್ಯ ಬಿದ್ದಾಗ ಶಸ್ತ್ರಾಸ್ತ್ರ ಸಜ್ಜಿತರಾಗಿ ಪ್ರಾಣ ತ್ಯಾಗಕ್ಕೂ ಸಿದ್ಧರಾಗಬೇಕಾಗುತ್ತದೆ ಎಂದು ತಾವು ಪಾಲ್ಗೊಂಡ ದಲಿತ ಸಭೆಗಳಲ್ಲಿ ಆಶೀರ್ವಚನ ನೀಡುತ್ತಿದ್ದರು. ತಮ್ಮ ಈ ಕ್ರಿಯೆಗೆ ಸಪೋರ್ಟೀವ್ ಆಗಿ ಒಬ್ಬ ದಲಿತ ಸ್ವಾಮೀಜಿಯನ್ನೂ ಇಟ್ಟುಕೊಂಡಿದ್ದರು. ಅವರ ಬಾಯಿಯಿಂದಲೂ ಹೆಚ್ಚು ಕಡಿಮೆ ಹೀಗೇ ಹೇಳಿಸುತ್ತಿದ್ದರು.

ಇಂಥ ಖ್ಯಾತಿವೆತ್ತ ಸ್ವಾಮೀಜಿಗಳಿರುವ ಮಠ ಬೇರೆಲ್ಲೋ ದೂರದಲ್ಲಿರದೆ ಬೆಂಕಿಪುರದ ಸಮೀಪದಲ್ಲೇ ಇದ್ದು, ಮಂಜೇಗೌಡರು ಸದರಿ ಮಠದ ಭಕ್ತರೇ ಆಗಿದ್ದರು. ಮಂಜೇಗೌಡರು ಸ್ವಾಮೀಜಿಯವರನ್ನು ಕಾಣಲು ಬರುವ ಅರ್ಧಗಂಟೆ ಮುಂಚಿತವಾಗಷ್ಟೆ ತೋಟಗಾರಿಕೆ ಮಂತ್ರಿಗಳ ಕರೆ ಬಂದಿತ್ತು. ಈ ಮಂತ್ರಿಗಳೋ ತಮ್ಮ ಹರುಕು ಬಾಯಿಯಿಂದಲೇ ಪ್ರಸಿದ್ಧಿಗೆ ಬಂದವರು. ಈ ಬಾರಿ ಅವರು ದಲಿತ ಮಹಿಳೆಯೊಬ್ಬರನ್ನ ಏನೋ ತುಚ್ಛವಾಗಿ ಅಂದು ಸಿಗಾಕಿಕೊಂಡಿದ್ದರು. ಇದು ತನ್ನ ಬುಡಕ್ಕೇ ಬರುತ್ತದೆಂಬುದು ಅನ್ನುವವರೆಗೂ ಎಂದೂ ಅವರಿಗೆ ತಿಳಿಯುತ್ತಿರಲಿಲ್ಲ. ಮುಖ್ಯಮಂತ್ರಿಗಳೂ ಸಹ ಕರೆದು ಕ್ಯಾಕರಿಸಿ ಉಗಿದಿದ್ದರು. ಈ ಬೀಸುವ ದೊಣ್ಣೆಯಿಂದ ಹೇಗಾದರೂ ಮಾಡಿ ತಪ್ಪಿಸಿಕೊಳ್ಳಬೇಕೆಂದು ಬೆಳ್ಳಂಬೆಳಗ್ಗೆ ಸ್ವಾಮಿಜಿಗಳಿಗೆ ಕರೆ ಮಾಡಿ ಅಲವೊತ್ತುಕೊಂಡಿದ್ದರು. ಇದೇ ಸಂದರ್ಭದಲ್ಲಿ ಮಂಜೇಗೌಡರು ಪಟೇಲರ ಜೊತೆಗೂಡಿ ಬಂದು ಶ್ರೀಗಳ ಪಾದಗಳಿಗೆ ಪಣಮಿಟ್ಟು ತಮ್ಮೂರ ದಲಿತರ ಕ್ರಿಸ್ತತ್ವದಿಂದ ವೈಯಕ್ತಿಕವಾಗಿ ತಮಗೂ ಹಾಗೂ ತಮ್ಮ ಊರಿಗೂ ಆಗುತ್ತಿರುವ ನಷ್ಟವನ್ನು ತೋಡಿಕೊಂಡರು. ಕೂಡಲೆ ಸ್ವಾಮಿಗಳು ಮುಂದಿನ ತಿಂಗಳು ಬೆಂಕಿಪುರ ಕಾಲೋನಿಯಲ್ಲೇ ನನ್ನ ಪಾದಪೂಜೆ ನೆರವೇರಲಿದೆ, ನನ್ನೊಂದಿಗೆ ಮಂತ್ರಿಗಳೂ ಈ ಬಾರಿ ಬರಲಿದ್ದಾರೆ, ಅದ್ಹೇಗೆ ಕಾಲೋನಿ ನಿಮ್ಮ ಹಿಡತದಿಂದ ಕೈತಪ್ಪಿ ಹೋಗುತ್ತದೆ ನಾನು ನೋಡುತ್ತೇನೆ ಎಂದು ಅಭಯ ನೀಡಿದರು.

ನೀರು ಕೇಳಲು ಬಂದವರಿಗೆ ಮಜ್ಜಿಗೆಯೇ ಸಿಕ್ಕಂತಾಗಿ ಮಂಜೇಗೌಡರು ತಮಗೆ ಬಂದಿರುವ ಸಂಕಷ್ಟವೆಲ್ಲ ದೂರಾದಂತೆಯೇ ಸರಿ ಎಂದು ಉತ್ಸಾಹದಿಂದ ಊರಿಗೆ ಹಿಂತಿರುಗಿದರು. ಆ ರಾತ್ರಿಯೇ ತಮ್ಮ ಪಟಾಲಂಗಳ ಜೊತೆಗೂಡಿ ಕಾಲೋನಿಗೆ ಭೇಟಿ ನೀಡಿದರು. ಅವರ ಎಂದಿನ ಅನುಯಾಯಿಗಳಾದ ಕರ್ಯ, ಮಾದ, ಚನ್ನ ಮುಂತಾದವರನ್ನು ಕರೆದು ಹಟ್ಟಿಮುಂದೆ ಕೂರಿಸಿಕೊಂಡು, ‘ಏನ್ರುಲ ನಿಮ್ಮ ಅದೃಷ್ಟ, ಯಾರಿಗೆ ಸಿಗುತ್ತೊ ಇಂಥ ಪುಣ್ಯ’ ಎಂದು ಶುರುಮಾಡಿ ಸ್ವಾಮಿಗಳು ಇಂಥ ದಿನ ಮಂತ್ರಿಗಳ ಒಡಗೂಡಿ ನಿಮ್ಮ ಕಾಲೋನಿಗೆ ಪಾದಪೂಜೆಗೆ ಬರಲು ಒಪ್ಪಿದ್ದಾರೆ, ನೀವೆಲ್ಲ ಇದನ್ನ ಸಡಗರದಿಂದ ಸ್ವಾಗತಿಸಬೇಕು ಎಂದು ಪುನೀತ ಭಾವದಿಂದ ಹೇಳಿದರು. ಗೌಡರ ಸಂತೋಷ ನಮ್ಮದೇ ಸಂತೋಷವೆಂಬಂತೆ ಹಟ್ಟಿ ಹಿರಿಯರೂ ಮುಖದಲ್ಲಿ ಸಂಭ್ರಮ ತಂದುಕೊಂಡರು. ಗೌಡರು ಮುಂದುವರೆದು, ‘ಆವತ್ತಿನ ಖರ್ಚೆಲ್ಲ ಏನೇನ್ ಬರುತ್ತೊ ಎಲ್ಲಾ ನಾನೆ ನೋಡ್ಕೆಂತಿನಿ, ಶ್ಯಾಮಿಯಾನ ಅದು ಇದು ಎಲ್ಲ ನಂದೆ, ನೀವೆಲ್ಲ ಆವತ್ತೊಂದಿನ ಎಲ್ಲೂ ಹೋಗ್ದಂಗೆ ಇದ್ದು ಸ್ವಾಮಿಗಳ ಪಾದಪೂಜೆ ನೆರವೇರಿಸಿಕೊಡಬೇಕು, ಮಂತ್ರಿಗಳೂ ಬರೋದ್ರಿಂದ ಊರಿಗೆ ಅದೃಷ್ಟವೇ ಬಂದಂಗೆ, ಏನಂತಿರ’ ಎಂದರು. ಹಟ್ಟಿಯ ಹಿರಿಯ ತಲೆಗಳು ಆಯ್ತು ಕಣ್ ಬುದ್ಧಿ ನೀವ್